PW-3 ನಿಂಗಣ್ಣ

Date: 18.11.2025

**ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲು ಪ್ರತಿವಾದಿ ಪರ ಶ್ರೀ ಎ ಎನ್ ವಕೀಲರಿಂದಃ**

ನಾನು ಹುಟ್ಟಿದಾಗಿನಿಂದಲೂ ಕಾಮಸಮುದ್ರ ಗ್ರಾಮದಲ್ಲಿ ವಾಸವಾಗಿದ್ದೇನೆ. ದಾವಾ ಸ್ವತ್ತು ಮಂಜೂರಾದ ಜಮೀನು ಆಗಿರುತ್ತದೆ. ಮೂಲತಃ ಸದರಿ ಜಮೀನು ಎಲ್ಲರಿಗೂ 6 ಜನಕ್ಕೆ ಸೇರಿತ್ತು. ಅವರ ಹೆಸರು ಗಂಗಮ್ಮ, ವೆಂಕಟಪ್ಪ, ಸಣ್ಣಹನುಮಂತಪ್ಪ, ಹೊನ್ನೂರಪ್ಪ, ನರಸಿಂಹಮಪ್ಪ ಮತ್ತು ಹನುಮವ್ವ ರವರಿಗೆ ಸೇರಿದೆ. ನಾನು ಹೇಳಿದ ಎಲ್ಲಾ ಜನರು ವಾದಿಗಳಾಗಿರುತ್ತಾರೆ ಎಂದರೆ ಸರಿ. ವಾದಿಯರ ತಂದೆಯ ಹೆಸರು ನನಗೆ ಹೇಳಲಾಗುವುದಿಲ್ಲ. ನನಗೆ ಕುಂದುರ್ಪಯ್ಯ ರವರ ಪರಿಚಯವಿದೆ. ನನಗೆ ಓಬಳೇಶಪ್ಪ ರವರ ಪರಿಚಯವು ಇದೆ. ನನಗೆ ರಾಮದಾಸರವರ ಪರಿಚಯವಿದೆ. ನನಗೆ ರಾಮದಾಸಪ್ಪ ರವರ ತಂದೆಯ ಹೆಸರು ಗಂಗಪ್ಪ. ಆದರೆ ಅವರ ತಾಯಿಯ ಹೆಸರು ಗಂಗಮ್ಮ. ಓಬಳೇಶಪ್ಪ ರವರ ಮಗ ರಾಮದಾಸಪ್ಪ ಎಂದರೆ ನನಗೆ ಗೊತ್ತಿಲ್ಲ. ಮುಖ್ಯ ವಿಚಾರಣೆಯ ಪ್ರಮಾಣ ಪತ್ರವನ್ನು ತಯಾರಿಸಲು ವಕೀಲರಿಗೆ ನಾನೇ ಮಾಹಿತಿಯನ್ನು ಮೇಲೆ ಹೇಳಿದ ವ್ಯಕ್ತಿಗಳೆ ನೀಡಿರುತ್ತಾರೆ. ವಾದಿಗಳೇ ನನಗೆ ಸಾಕ್ಷ್ಯವನ್ನು ನುಡಿಯಲು ತಿಳಿಸಿರುತ್ತಾರೆ ಎಂದರೆ ಸರಿ. ಸಾಕ್ಷಿ ಮುಂದುವರೆದು ನಾನು ನಿಜ ಸಂಗತಿಗಳನ್ನು ನುಡಿಯುತ್ತಿದ್ದೇನೆ ಎಂದು ನುದಿಡಿರುತ್ತಾರೆ. ವಾದಿಗಳ ಹೆಸರಿನಲ್ಲಿ ದಾವಾ ಸ್ವತ್ತಿನ ದಾಖಲಾತಿ ಇರುವುದನ್ನು ನಾನು ನೋಡಿಲ್ಲ. ಯಾವುದೇ ದಾಖಲಾತಿಗಳನ್ನು ನೋಡದೆ ನಾನು ಸುಳ್ಳು ಸಾಕ್ಷ್ಯವನ್ನು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ರಾಮದಾಸಪ್ಪ ಮತ್ತು ಅವರ ಮಕ್ಕಳ ನಡುವೆ ವಿಭಜನೆಯಾದಾಗ ಯಾರು ಕೂಡ ತಕರಾರು ಪಡಿಸಲಿಲ್ಲ ಎಂದರೆ ಸಾಕ್ಷಿ ಯಾವುದೇ ವಿಭಾಗ ಆಗಿಲ್ಲ ಎಂದು ನುಡಿದಿರುತ್ತಾರೆ. ಯಾವುದೇ ಮಾಹಿತಿ ಇರದೇ ಇದ್ದರು ಕೂಡ ನಾನು ಸುಳ್ಳು ಸಾಕ್ಷ್ಯವನ್ನು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆಃ ಇರುವುದಿಲ್ಲ.**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು).

ಓ.ಹೇ.ಕೇ. ಸರಿ ಇದೆ.

ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ., ಚಳ್ಳಕೆರೆ

OS No.255/2022

PW-2 ರಾಮಾಂಜನೇಯ

Date: 18.11.2025

**ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲು ಪ್ರತಿವಾದಿ ಪರ ಶ್ರೀ ಎ ಎನ್ ವಕೀಲರಿಂದಃ**

ನಾನು ಹುಟ್ಟಿದಾಗಿನಿಂದಲೂ ಕಾಮಸಮುದ್ರ ಗ್ರಾಮದಲ್ಲಿ ವಾಸವಾಗಿದ್ದೇನೆ. ದಾವಾ ಸ್ವತ್ತು ಮಂಜೂರಾದ ಜಮೀನು ಆಗಿರುತ್ತದೆ. ಮೂಲತಃ ಸದರಿ ಜಮೀನು ಎಲ್ಲರಿಗೂ 6 ಜನಕ್ಕೆ ಸೇರಿತ್ತು. ಅವರ ಹೆಸರು ಗಂಗಮ್ಮ, ವೆಂಕಟಪ್ಪ, ಸಣ್ಣಹನುಮಂತಪ್ಪ, ಹೊನ್ನೂರಪ್ಪ, ನರಸಿಂಹಮಪ್ಪ ಮತ್ತು ಹನುಮವ್ವ ರವರಿಗೆ ಸೇರಿದೆ. ನಾನು ಹೇಳಿದ ಎಲ್ಲಾ ಜನರು ವಾದಿಗಳಾಗಿರುತ್ತಾರೆ ಎಂದರೆ ಸರಿ. ವಾದಿಯರ ತಂದೆಯ ಹೆಸರು ನನಗೆ ಹೇಳಲಾಗುವುದಿಲ್ಲ. ನನಗೆ ಕುಂದುರ್ಪಯ್ಯ ರವರ ಪರಿಚಯವಿಲ್ಲ. ನನಗೆ ಓಬಳೇಶಪ್ಪ ರವರ ಪರಿಚಯವು ಕೂಡ ಇಲ್ಲ. ನನಗೆ ರಾಮದಾಸರವರ ಪರಿಚಯವಿದೆ. ನನಗೆ ರಾಮದಾಸಪ್ಪ ರವರ ತಂದೆಯ ಹೆಸರು ಗೊತ್ತಿಲ. ಆದರೆ ಅವರ ತಾಯಿಯ ಹೆಸರು ಗಂಗಮ್ಮ. ಓಬಳೇಶಪ್ಪ ರವರ ಮಗ ರಾಮದಾಸಪ್ಪ ಎಂದರೆ ಸರಿ. ಮುಖ್ಯ ವಿಚಾರಣೆಯ ಪ್ರಮಾಣ ಪತ್ರವನ್ನು ತಯಾರಿಸಲು ವಕೀಲರಿಗೆ ನಾನೇ ಮಾಹಿತಿಯನ್ನು ನೀಡಿದ್ದೇನೆ. ವಾದಿಗಳೇ ನನಗೆ ಸಾಕ್ಷ್ಯವನ್ನು ನುಡಿಯಲು ತಿಳಿಸಿರುತ್ತಾರೆ ಎಂದರೆ ಸರಿ. ಸಾಕ್ಷಿ ಮುಂದುವರೆದು ನಾನು ನಿಜ ಸಂಗತಿಗಳನ್ನು ನುಡಿಯುತ್ತಿದ್ದೇನೆ ಎಂದು ನುಡಿದಿರುತ್ತಾರೆ. ವಾದಿಗಳ ಹೆಸರಿನಲ್ಲಿ ದಾವಾ ಸ್ವತ್ತಿನ ದಾಖಲಾತಿ ಇರುವುದನ್ನು ನಾನು ನೋಡಿಲ್ಲ. ಯಾವುದೇ ದಾಖಲಾತಿಗಳನ್ನು ನೋಡದೆ ನಾನು ಸುಳ್ಳು ಸಾಕ್ಷ್ಯವನ್ನು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ರಾಮದಾಸಪ್ಪ ಮತ್ತು ಅವರ ಮಕ್ಕಳ ನಡುವೆ ವಿಭಜನೆಯಾದಾಗ ಯಾರು ಕೂಡ ತಕರಾರು ಪಡಿಸಲಿಲ್ಲ ಎಂದರೆ ಸಾಕ್ಷಿ ಯಾವುದೇ ವಿಭಾಗ ಆಗಿಲ್ಲ ಎಂದು ನುಡಿದಿರುತ್ತಾರೆ. ಯಾವುದೇ ಮಾಹಿತಿ ಇರದೇ ಇದ್ದರು ಕೂಡ ನಾನು ಸುಳ್ಳು ಸಾಕ್ಷ್ಯವನ್ನು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆಃ ಇರುವುದಿಲ್ಲ.**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು).

ಓ.ಹೇ.ಕೇ. ಸರಿ ಇದೆ.

ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು

ಜೆ.ಎಂ.ಎಫ್.ಸಿ., ಚಳ್ಳಕೆರೆ